# ಗಂಡು ಮಗುವಿನ ಸಂಭ್ರಮ

■ ವೇದಾವತಿ. ಎಂ.



ಇದು ನಿತ್ಯವೂ ನಮ್ಮ ಸುತ್ತ ಮುತ್ತ ಅನುಭವಕ್ಕೆ ಬರುವ ಲಿಂಗ ತಾರತಮ್ಯಕ್ಕೆ ಸಂಬಂಧಿಸಿದ ಒಂದು ಎಳೆ. ನಾವೆಲ್ಲಾ ಆಧುನಿಕತೆಯ ಪರಮಾವಧಿಯಲ್ಲಿದ್ದೇವೆ. ತಂತ್ರಜ್ಞಾನದಲ್ಲಿ ಪರಾಕಾಷ್ಠೆಯನ್ನು ತಲುಪಿದ್ದೇವೆ. ಒಂದು ರೀತಿಯಲ್ಲಿ ನಾವೆಲ್ಲಾ ತುಂಬಾ 'ಪ್ರಾಕ್ಟಿಕಲ್' ಆಗಿ ಹೋಗಿದ್ದೇವೆ. ಹಾಗೇ ಹೇಳುವುದೂ ಹೆಮ್ಮೆಯಿಂದಲೇ. ಆದರೂ ಮಕ್ಕಳ ವಿಚಾರಕ್ಕೆ ಬಂದಾಗ 'ಗಂಡು ಮಗು' ಎಂಬ ಹುಚ್ಚು ಆಸೆಗೆ 'ನಾವು ತುಂಬಾ ಎಮೋಶನಲ್' ಎನ್ನುತ್ತಾ ವಿದ್ಯಾವಂತ ವರ್ಗ ಸ್ಪಂದಿಸುತ್ತದೆ ಎಂಬುದು ಅಚ್ಚರಿಯೇ ಸರಿ. ಸಮಾಜದ ವಿದ್ಯಾವಂತ, ಪ್ರತಿಷ್ಠಿತ, ಸುಶಿಕ್ಷಿತ ವರ್ಗದಲ್ಲಿ ಬಹುಪಾಲು ಇದು ಕಂಡು ಬರುತ್ತದೆ.

ಇತ್ತೀಚೆಗೆ ನಮ್ಮ ಸ್ನೇಹಿತರೊಬ್ಬರಿಗೆ ಎರಡನೇ ಸಂತಾನ ಗಂಡು ಮಗುವಾಯಿತು. ಸಮಾಜದ ಉನ್ನತ ವರ್ಗದಲ್ಲಿ ಉದ್ಯೋಗದಲ್ಲಿದ್ದ ಅವರು ಅವರ ಗೆಳೆಯರ ಬಳಗದಲ್ಲಿ ಸಿಹಿ ಹಂಚಿ ಸಂಭ್ರಮಿಸಿದ್ದೇ ಸಂಭ್ರಮಿಸಿದ್ದು. 'ನನಗೆ ಗಂಡು ಮಗು ಆಯಿತು' ಎಂದು ಹೇಳಿದ್ದೇ ಹೇಳಿದ್ದು. ಮಗುವಿನ ಜನನದ ಸಂತೋಷದ ಆಚರಣೆ ಸಹಜ ಅಲ್ಲವೇ ಅನಿಸಿರಬಹುದು. ಆದರೆ ಇಂತಹ ಪ್ರತಿಕ್ರಿಯೆ, ಖುಷಿ ಮೊದಲನೇ ಮಗುವಿಗಿರಲಿಲ್ಲ. ಕಾರಣ ಅದು ಹೆಣ್ಣು ಮಗು. ಇದೊಂದು ಎಲ್ಲೆಡೆ ನಾವು ಕಾಣುವಂತದ್ದೇ. ಆದರೂ ಇಂತಹ ವರ್ತನೆಗಳು ಒಂದು ಅಥವಾ ಇಬ್ಬರೂ  ಹೆಣ್ಣು ಮಕ್ಕಳಿದ್ದ ಪೋಷಕರಿಗೆ ಕಿರಿಕಿರಿಯೆನಿಸುವುದಂತೂ ಸತ್ಯ.

ಆರ್ಥಿಕವಾಗಿ ಹಾಗೂ ಆಧುನಿಕತೆಯಲ್ಲಿ ಅತೀ ಮುಂದುವರಿದ ಒಂದಷ್ಟು ರೀತಿಯ ಜನರಿಗೆ ಇತ್ತೀಚೆಗೆ ಮಕ್ಕಳು ಬೇಕೇ ಬೇಕು ಎನ್ನುವ ಹಠವೇನೂ ಇಲ್ಲ. ಆದರೆ ಮಧ್ಯಮ ವರ್ಗದ ಜನರಲ್ಲಿ ಮಕ್ಕಳ ವಿಚಾರ ಅತಿ ಪ್ರಮುಖ ಪಾತ್ರ ವಹಿಸುತ್ತದೆ. ಇವುಗಳ ನಡುವೆ ಹೆಣ್ಣಿರಲಿ, ಗಂಡಿರಲಿ ಒಂದೇ ಮಗು ಸಾಕು ಎಂಬ ದೃಢ ನಿರ್ಧಾರದ ಹಲವು ಮಂದಿ ಇದ್ದಾರೆ. ಹಾಗೇ ಹೇಳಿದಂತೆ ನಡೆಯುತ್ತಿದ್ದಾರೆ. ಕೆಲವರು ಒಂದೇ ಮಗು, ಅದೂ ಹೆಣ್ಣು ಮಗುವೇ ಬೇಕೆಂದು ಬಯಸಿ ಪ್ರೀತಿಯಿಂದ ಸಾಕುತ್ತಿದ್ದಾರೆ. ಯಾವುದಾದರೂ ಸರಿ ಎರಡು ಮಕ್ಕಳಿರಲಿ ಎನ್ನುವವರಲ್ಲಿ ಇಬ್ಬರೂ ಹೆಣ್ಣು ಮಕ್ಕಳೇ ಇರುವ ಪೋಷಕರೂ ಸಾಕಷ್ಟಿದ್ದಾರೆ. ಅದಕ್ಕಾಗಿ ಅವರಿಗೆ ಪಶ್ಚಾತ್ತಾಪವೇನೂ ಇಲ್ಲ.

ಇದರಲ್ಲಿ ಒಂದಷ್ಟು ಜನ ಆದರ್ಶವಂತರಾದರೆ, ಕೆಲವರಲ್ಲಿ ದೇವರು ಕೊಟ್ಟಿದ್ದು, ಯಾವುದಾದರೇನು? ಎನ್ನುವ ಸಮಾನಭಾವ. ಇನ್ನು ಕೆಲವರದು ಯಾವುದಾದರೇನು, ಅಂಗವೈಕಲ್ಯವಿಲ್ಲದಿದ್ದರೆ ಸಾಕು ಎನ್ನುವ ಆರೋಗ್ಯವಂತ ನಿರ್ಧಾರ. 'ಗಂಡೇ ಯಾಕೆ ಬೇಕು? ಇಂದು ಇಬ್ಬರಿಗೂ ಒಂದೇ ಖರ್ಚು' ಎನ್ನುವವರೂ ಉಂಟು.



ರಾಜ ಮಹಾರಾಜರ ವಂಶವನ್ನೇ ಉದ್ಧಾರ ಮಾಡಲು ಗಂಡು ಮಕ್ಕಳಿಲ್ಲ, 'ಹೋಗ್ರಿ ವಂಶೋದ್ಧಾರಕತೆ ಅರ್ಥವಿಲ್ಲದ್ದು' ಎನ್ನುವ ವರ್ಗ ಇನ್ನೊಂದೆಡೆ. ಇವರಲ್ಲಿ ಶೇ. 50 ರಷ್ಟು ಜನರಲ್ಲಿ ಆಯ್ಕೆ, ನಿರ್ಧಾರ ಅವರದ್ದೇ ಆಗಿರುತ್ತದೆ.

ಹೀಗಿರುವಾಗ ಇನ್ನೊಂದು ವಿದ್ಯಾವಂತ ವರ್ಗ ಗಂಡೇ ಬೇಕು ಎನ್ನುವ ಹಠದಲ್ಲಿ 3–4 ಮಕ್ಕಳನ್ನು ಮಾಡಿ ಕೊಳ್ಳುವ ನಿರ್ಧಾರದಲ್ಲಿದ್ದಾರೆ. ಹಾಗೇ ಕೊನೆಯದಾಗಿ ಹುಟ್ಟಿದ ಗಂಡು ಮಗುವನ್ನು ಸಮಾಜದಲ್ಲಿ ಮೆರೆಸುವ ಅಲ್ಪ ಬುದ್ಧಿಯ ವರ್ಗ ಇನ್ನೂ ಇದೆ ಎಂದರೆ ಖಂಡಿತ ಅಚ್ಚರಿ ಪಡಲೇಬೇಡಿ. ಹಾಗೇ ಗಂಡನ್ನು ಹೆರುವುದು ಪ್ರತಿಷ್ಠೆಯ ವಿಚಾರವೆಂಬಂತೆ (ಎಲ್ಲರೂ ಅಲ್ಲ), ಹೆಣ್ಣು ಹೆತ್ತವರಿಗೆ ಅನುಕಂಪದ ಕುಹಕವಾಗಿ ಕಿರಿಕಿರಿ ಉಂಟು ಮಾಡುವ ಒಂದು ಗುಂಪು ನಮ್ಮಲ್ಲಿ ಇಂದಿಗೂ ಲಭ್ಯ.

ಹೀಗೆ ಒಂದು ಅಥವಾ ಇಬ್ಬರೂ ಹೆಣ್ಣು ಮಕ್ಕಳಿರುವ ಪೋಷಕರಿಗೆ ಪರಿಚಿತರಿಂದ ಸಿಗುವ ಬಿಟ್ಟಿ ಸಲಹೆ, ಅನುಕಂಪಗಳು ದೇವರಿಗೇ ಪ್ರೀತಿ.

'ಏನ್ಮಾಡ್ತೀರಿ ಯಾವುದೋ ಜನ್ಮದ ಕರ್ಮ, ಅನುಭವಿಸಬೇಕು. ಬೇಜಾರು ಮಾಡಿಕೊಳ್ಳಬೇಡಿ'; 'ಅಯ್ಯೋ ಗಂಡು ಮಕ್ಕಳು ನೋಡೋದು ಅಷ್ಟರಲ್ಲೇ ಇದೆ. ಒಳ್ಳೆದಾಯ್ತು ಬಿಡಿ'; 'ಎರಡೂ ಹೆಣ್ಣೇ, ಇರಲಿ ಬಿಡಿ. ಈ ಕಾಲದಲ್ಲಿ ಎಲ್ಲಾ ಒಂದೇ. ಅಂದ ಹಾಗೆ ನನ್ನ ಮಗನಿಗೆ ಇಬ್ಬರು ಗಂಡು ಮಕ್ಕಳು'..

'ನಿಮ್ಮ ಸಂಪಾದನೆಯೆಲ್ಲಾ ಕಂಡೋರಿಗೆ ಆಗೋಗುತ್ತೆ. ಇರಲಿ ಬಿಡಿ ನಮ್ಮ ಮಕ್ಕಳೇ ಅಲ್ವಾ' ಹೀಗೆ ನಾನಾ ರೀತಿ ಇವೆ. ಇದರಲ್ಲಿ ವ್ಯಂಗ್ಯ, ಕುಹಕಗಳ ಮಹಾಪೂರವೇ ಇರುತ್ತದೆ.

ಅವಿದ್ಯಾವಂತ ತಂದೆಯೊಬ್ಬರ ಒಂದು ಆಲೋಚನೆ ಹೀಗಿದೆ. 'ಹೆಣ್ಮಕ್ಳು ಓದದೇ ಹೋದ್ರೆ, ಒಳ್ಳೇ ಕಡೆ ಮದುವೆ ಮಾಡಿ ಅವಳ ಜೀವನ ರೂಪಿಸಬಹುದು. ಆದರೆ ಗಂಡು ಮಕ್ಕಳು ಅಕಸ್ಮಾತ್ ಸರಿಯಾಗಿ ಓದದೇ ಅಡ್ಡದಾರಿ ಹಿಡಿದರೆ ಶಾಪವಾಗಿ, ನಮಗೇ ಹೊರೆಯಾಗಿ ಬಿಡ್ತಾರೆ ಕಣವ್ವ, ಏನ್ಮಾಡೋದು', ಹೌದಲ್ಲಾ ಅಂತ ಚಿಂತನೆ ಮಾಡುವಷ್ಟರಲ್ಲಿ ಅದೇ ಗಂಡು ಪ್ರೇಮಿಗಳ ಮಾತು 'ಕೈಗೆ ಸಿಗದ ದಾಕ್ಷಿ ಹುಳಿ'.

ಕುಟುಂಬ ವರ್ಗದಲ್ಲಿ ಸಂತಾನ ಜೀವನದ ಅತಿ ಮುಖ್ಯ ಭಾಗ. ಇದರ ಆಯ್ಕೆ ನಮ್ಮ ಕೈಯಲಿಲ್ಲ. ಇರಲೂ ಬಾರದು. ಹಾಗೇ ಆಯ್ಕೆ ಮಾಡ ಹೊರಟವರೇ ಇಂದಿನ ಲಿಂಗ ತಾರತಮ್ಯದ ರೂವಾರಿಗಳು ಹಾಗೂ ಪ್ರಕೃತಿಯ ಸಹಜ ಅನುಪಾತದ ಏರುಪೇರಿಗೆ ಕಾರಣಕರ್ತರು. ಆದರೂ ಸಮಾಜದಲ್ಲಿ ಒಂದು ಆರೋಗ್ಯಕರ ಚಿಂತನೆ ಸದ್ದಿಲ್ಲದೇ ಬೆಳವಣಿಗೆಯಾಗುತ್ತಿದೆ. ಅದು ಹೆಮ್ಮರವಾಗುವ ಕಾಲವೂ ದೂರವಿಲ್ಲ. ■